# ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು

**ಉರ್ವಾಸ್ಟೋರ್, ಮಂಗಳೂರು**

**ದೂರವಾಣಿ ಸಂಖ್ಯೆ 0824-2451034,** E.mail Add: dkzpadm@gmail.com


ಸಂ:ದಕಜಿಪ/ಆಡಳಿತ/ಗ್ರಾಪಂಸಿ/ಸಿಆರ್ 14/2022-23(ಎ7) ದಿನಾಂಕ: 03 .~~12~~ 01 .2022 3

## ಅಧಿಕೃತ ಜ್ಞಾಪನ

**ವಿಷಯ :** 01.01.2022ರಲ್ಲಿದ್ದಂತೆ ದ.ಕ.ಜಿಲ್ಲೆಯ ಗ್ರಾಮ ಪಂಚಾಯತ್‌ಗಳ ಅಕೌಂಟೆಂಟ್ಸ್/ಕ್ಲರ್ಕ್ಸ್/ಟೈಪಿಸ್ಟ್ಸ್/ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್‌ಗಳ ವೃಂದದಲ್ಲಿ 06 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಗ್ರಾಮ ಪಂಚಾಯತ್ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ

**ಉಲ್ಲೇಖ:** 1. ಸರಕಾರದ ಆದೇಶ ಸಂಖ್ಯೆ/ ಆರ್‌ಡಿಪಿಆರ್/630/ಜಿಪಿಎಸ್/2020(ಪಿ-1) ದಿನಾಂಕ 31.03.2022.

2. ಈ ಕಛೇರಿಯ ಸಮ ಸಂಖ್ಯೆಯ ಅಧಿಕೃತ ಜ್ಞಾಪನ ಪತ್ರ ದಿನಾಂಕ 17.10.2022.

~~~~

ದಿನಾಂಕ 01.01.2022ರಲ್ಲಿದ್ದಂತೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಅನುಮೋದನೆಗೊಂಡು 06 ವರ್ಷ ಮೇಲ್ಪಟ್ಟು ತೃಪ್ತಿಕರವಾಗಿ ಸೇವೆ ಸಲ್ಲಿಸುತ್ತಿರುವ ಅಕೌಂಟೆಂಟ್ಸ್/ಕ್ಲರ್ಕ್ಸ್/ಟೈಪಿಸ್ಟ್ಸ್/ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್‌ಗಳ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯತ್ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(2)ರ ಪತ್ರದಲ್ಲಿ ಎಲ್ಲಾ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರ ಮೂಲಕ ಕಳುಹಿಸಿ ಯಾವುದೇ ಆಕ್ಷೇಪಣೆಗಳಿದ್ದಲ್ಲಿ 07.11.2022ರೊಳಗೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ಈ ಕೆಳಗಿನ ನೌಕರರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಈ ಕೆಳಗಿನಂತೆ ಇತ್ಯರ್ಥಪಡಿಸಲಾಗಿದೆ.

| ಕ್ರ. ಸಂ | ಆಕ್ಷೇಪಣೆದಾರರ ಹೆಸರು ಮತ್ತು ವಿಳಾಸ | ಆಕ್ಷೇಪಣೆಗಳು | ವಿವರಣೆಗಳು |
|---|---|---|---|
| 1 | 2 | 3 | 4 |
| 1 | ಶ್ರೀಮತಿ ಶರ್ಮಿಳಾ, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ಪಡುಪಣಂಬೂರು ಗ್ರಾಮ ಪಂಚಾಯತ್, ಮುಲ್ಕಿ ತಾಲೂಕು. | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಗಳ ಜೇಷ್ಠತಾ ಪಟ್ಟಿಯಲ್ಲಿ ಕಾಲಂ 08ರಲ್ಲಿ ವಿದ್ಯಾರ್ಹತೆ ಪಿಯುಸಿ ಎಂದು ದಾಖಲಾಗಿದ್ದು, ಅದನ್ನು ಬಿಕಾಂ ಪದವಿ ಎಂದು ಸರಿಪಡಿಸುವಂತೆ ಕೋರಿಕೆ. | ಶ್ರೀಮತಿ ಸುನಿತಾ, ಬಿಲ್‌ಕಲೆಕ್ಟರ್, ಪಡುಪಣಂಬೂರು ಗ್ರಾಮ ಪಂಚಾಯತ್, ಇವರು ಮಂಗಳೂರು ವಿಶ್ವ ವಿದ್ಯಾನಿಲಯದಿಂದ 3ನೇ ವರ್ಷದ ಬಿಕಾಂ ಪರೀಕ್ಷೆಯಲ್ಲಿ ಉತ್ತೀರ್ಣ ಆದ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಮಾತ್ರ ನೀಡಿದ್ದು, ದೃಢೀಕೃತ ಪ್ರಮಾಣ ಪತ್ರಗಳನ್ನು ಮತ್ತು Convocation Certificateನ್ನು ಸಲ್ಲಿಸದೇ ಇರುವುದರಿಂದ ಇವರ ಮನವಿಯನ್ನು ತಿರಸ್ಕರಿಸಲಾಗಿದೆ. |
~~~~

| | | | |
|---|---|---|---|
| 2 | ಶ್ರೀ ಜಿತೇಶ್ ಕುಮಾರ್ ಎನ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ಕುಟ್ರುಪ್ಪಾಡಿ ಗ್ರಾಮ ಪಂಚಾಯತ್, ಕಡಬ ತಾಲೂಕು. | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್‌ಗಳ ಜೇಷ್ಠತಾ ಪಟ್ಟಿಗೆ ಹೆಸರು ಸೇರ್ಪಡೆ ಮಾಡುವ ಕುರಿತು. | ಕುಟ್ರುಪ್ಪಾಡಿ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಿ.ನಂ4/2012-13/ ದಿನಾಂಕ 27.10.2012ರಲ್ಲಿ ಶ್ರೀ ಜಿತೇಶ್ ಕುಮಾರ್ ಎನ್, ಇವರನ್ನು ಕುಟ್ರುಪ್ಪಾಡಿ ಗ್ರಾಮ ಪಂಚಾಯತ್‌ನ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಗೆ ನೇಮಕಾತಿ ಮಾಡಿ ನಿರ್ಣಯ ಕೈಗೊಂಡಿದ್ದು, ಸದ್ರಿ ನೇಮಕಾತಿಗೆ ಜಿಲ್ಲಾ ಪಂಚಾಯತಿಯ ಆದೇಶ ಸಂ/ದಕಜಿಪ/ಆಡಳಿತ/ಸಿಆರ್27/2017-18/ ದಿನಾಂಕ 09.06.2018ರಲ್ಲಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಗೆ ಅನುಮೋದನೆ ನೀಡಲಾಗಿದ್ದು, ದಿನಾಂಕ 02.11.2012ರಿಂದ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ದೃಢೀಕರಣ ನೀಡಿರುತ್ತಾರೆ. ಸದ್ರಿಯವರ ಮನವಿಯನ್ನು ಪುರಸ್ಕರಿಸಲಾಗಿದೆ. |
| 3 | ಶ್ರೀ ಪೂವಪ್ಪ ಮಲೆಕುಡಿಯ, ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ಮಲವಂತಿಗೆ ಗ್ರಾಮ ಪಂಚಾಯತ್, ಬೆಳ್ತಂಗಡಿ ತಾಲೂಕು | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್‌ಗಳ ಜೇಷ್ಠತಾ ಪಟ್ಟಿಯಲ್ಲಿ ವಿಕಲ ಚೇತನ ನಮೂದಿಸುವ ಕುರಿತು. | ಶ್ರೀ ಪೂವಪ್ಪ ಮಲೆಕುಡಿಯ,ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ಮಲವಂತಿಗೆ ಗ್ರಾಮ ಪಂಚಾಯತ್ ಇವರು **Unique disability ID No . KA 2150319740067684** ದ ವಿಶೇಷಚೇತನ ಐಡಿಯ ಪ್ರತಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ದೃಢೀಕರಿಸಿ ಸಲ್ಲಿಸಿರುತ್ತಾರೆ. ಅದರಲ್ಲಿ ವಿಶೇಷಚೇತನ ಪ್ರಮಾಣ 60% ಇರುತ್ತದೆ. ಆದುದರಿಂದ ಸದ್ರಿಯವರ ಮನವಿಯನ್ನು ಪುರಸ್ಕರಿಸಿ ಜೇಷ್ಠತಾ ಪಟ್ಟಿಯ ಕಾಲಂ ನಂ 12ರಲ್ಲಿ ವಿಶೇಷಚೇತನ ನಮೂದಿಸಬಹುದಾಗಿದ್ದು, ಮನವಿಯನ್ನು ಪುರಸ್ಕರಿಸಲಾಗಿದೆ. |
| 4 | ಆಶಾ .ವಿ, ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ಅಳಿಕೆ ಗ್ರಾಮ ಪಂಚಾಯತ್, ಬಂಟ್ವಾಳ ತಾಲೂಕು | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಗಳ ಜೇಷ್ಠತಾ ಪಟ್ಟಿಯಲ್ಲಿ ಕಾಲಂ 08 ರಲ್ಲಿ ವಿದ್ಯಾರ್ಹತೆ ಪಿಯುಸಿ ಎಂದು ದಾಖಲಾಗಿದ್ದು,ಅದನ್ನು ಬಿ.ಎ ಪದವಿ ಎಂದು ಸರಿಪಡಿಸುವಂತೆ ಕೋರಿಕೆ. | ಆಶಾ .ವಿ, ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ಅಳಿಕೆ ಗ್ರಾಮ ಪಂಚಾಯತ್, ಇವರು ಮಂಗಳೂರು ವಿಶ್ವ ವಿದ್ಯಾನಿಲಯದಿಂದ ಬಿಎ ಪರೀಕ್ಷೆಯಲ್ಲಿ ಉತ್ತೀರ್ಣ ಆದ **Convocation Certificate** ಪ್ರಮಾಣ ಪತ್ರದ ಪ್ರತಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ , ಅಳಿಕೆ ಗ್ರಾಮ ಪಂಚಾಯತ್, ಬಂಟ್ವಾಳ ತಾಲೂಕು ಇವರು ದೃಢೀಕರಿಸಿ ನೀಡಿದ್ದು, ಇವರ ಮನವಿಯನ್ನು ಪುರಸ್ಕರಿಸಲಾಗಿದೆ. |
| 5 | ಶ್ರೀಮತಿ ನಸೀಮಾ, ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್, ತೆಕ್ಕಾರು ಗ್ರಾಮ ಪಂಚಾಯತ್, ಬೆಳ್ತಂಗಡಿ ತಾಲೂಕು | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವಕ್ಲರ್ಕ್ ಕಂ ಡಾಟಾ ಎಂಟ್ರಿ ಗಳ ಜೇಷ್ಠತಾ ಪಟ್ಟಿಗೆ ಹೆಸರು ಸೇರ್ಪಡೆ ಮಾಡುವ ಕುರಿತು. | ಶ್ರೀಮತಿ ನಸೀಮಾ ಇವರಿಗೆ ಈ ಕಛೇರಿ ಆದೇಶ ಸಂ/ದಕಜಿಪ/ ಆಡಳಿತ/ ಗ್ರಾಪಂಸಿ/ಸಿಆರ್ 138/ 16-17/ಎ7/ದಿ:06.06.2016ರಲ್ಲಿ ದಿನಾಂಕ 25.05.2016 ರಿಂದ ಅನ್ವಯವಾಗುವಂತೆ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಗೆ ಅನುಮೋದನೆ ನೀಡಲಾಗಿದ್ದು, ದಿನಾಂಕ 01.01.2022ಕ್ಕೆ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಯಲ್ಲಿ ಸತತವಾಗಿ 6ವರ್ಷಗಳ ಸೇವೆ ಪೂರ್ಣಗೊಂಡಿರುವುದಿಲ್ಲ. ಆದುದರಿಂದ ಸದ್ರಿ ಮನವಿಯನ್ನು ತಿರಸ್ಕರಿಸಲಾಗಿದೆ. |
| 6 | ಶ್ರೀ ದಿನೇಶ್‌ಕುಮಾರ್.ಬಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್,ಸುಲ್ಕೇರಿ ಗ್ರಾಮ ಪಂಚಾಯತ್, ಬೆಳ್ತಂಗಡಿ ತಾಲೂಕು | ಗ್ರಾಮ ಪಂಚಾಯತಿಗಳಲ್ಲಿ 6 ವರ್ಷ ಮೇಲ್ಪಟ್ಟು ಸತತವಾಗಿ ಸೇವೆ ಸಲ್ಲಿಸಿರುವ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್‌ಗಳ ಜೇಷ್ಠತಾ ಪಟ್ಟಿಗೆ ಹೆಸರು ಸೇರ್ಪಡೆ ಮಾಡುವ ಕುರಿತು. | ಶ್ರೀ ದಿನೇಶ್‌ಕುಮಾರ್ ಬಿ. ಇವರಿಗೆ ಈ ಕಛೇರಿ ಆದೇಶ ಸಂ/ದಕಜಿಪ/ ಆಡಳಿತ/ಗ್ರಾಪಂಸಿ/ಸಿಆರ್ 146/16-17/ಎ7/ ದಿನಾಂಕ 06.06.2016ರಲ್ಲಿ ದಿನಾಂಕ 25.05.2016 ರಿಂದ ಅನ್ವಯವಾಗುವಂತೆ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಗೆ ಅನುಮೋದನೆ ನೀಡಲಾಗಿದ್ದು, ದಿನಾಂಕ 01.01.2022ಕ್ಕೆ ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್ ಹುದ್ದೆಯಲ್ಲಿ ಸತತವಾಗಿ 6ವರ್ಷಗಳ ಸೇವೆ ಪೂರ್ಣಗೊಂಡಿರುವುದಿಲ್ಲ. ಆದುದರಿಂದ ಸದ್ರಿ ಮನವಿಯನ್ನು ತಿರಸ್ಕರಿಸಲಾಗಿದೆ. |